ಆ) ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಬಾಕಿ ಇರುವ ಪ್ರಕರಣ ಗಳೆಷ್ಟು ; (ಇಲಾಖಾವಾರು ವಿವರ ನೀಡುವುದು) ;

ಆ) ನೇಮಕಾತಿ ಮಾಡುವಲ್ಲಿ ವಿಳಂಬಕ್ಕೆ ಕಾರಣವೇನು ;

ಇ) ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ;

ಈ) ಅನುಕಂಪದ ಆಧಾರದ ನೇಮಕಾತಿಗಾಗಿ ಇರತಕ್ಕ ನಿಯಮಗಳು ಯಾವುವು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :-

ಆ) ನೇಮಕಾತಿ ಮಾಡುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಿಗಳಿಗೆ ವಹಿಸಿ ಕೊಟ್ಟಿರುವುದರಿಂದ, ಮಾಹಿತಿಕೇಂದ್ರೀಕೃತವಾಗಿ ಲಭ್ಯವಿಲ್ಲ.

ಆ) ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಅನುಕಂಪ ನೇಮಕಾತಿಗಾಗಿ ನಿಯಮಗಳನ್ನು ರಚಿಸಲು, ಕರಡು ನಿಯಮಗಳನ್ನು ದಿನಾಂಕ : 23-3-96 ರಂದು ಹೊರಡಿಸಿ ಆಕ್ಷೇಪಣೆಗಳು : ಸಲಹೆಗಳನ್ನು ಆಹ್ವಾನಿಸಿತ್ತು. ಆ ರೀತಿ ಬಂದ ಆಕ್ಷೇಪಣೆಗಳು : ಸಲಹೆ ಗಳನ್ನು ಪರಿಶೀಲಿಸಲಾಗುತ್ತಿದ್ದು, ಸಧ್ಯದಲ್ಲಿಯೇ ಅಂತಿಮ ನಿಯಮಗಳನ್ನು ಹೊರಡಿಸ ಲಾಗುವುದು.

ಇ) ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಪರಿಗಣಿಸಲು ಕರಡು ನಿಯಮ ಗಳಲ್ಲಿ ಅಸ್ಪದವನ್ನು ಕಲ್ಪಿಸಲಾಗಿದೆ.

ಈ) ಸದ್ಯಕ್ಕೆ ಯಾವ ನಿಯಮಗಳು ಇಲ್ಲ. ಕರಡು ನಿಯಮಗಳನ್ನು ಈಗಾಗಲೇ ಪ್ರಕಟಪಡಿಸಿದೆ. ಬಂದಿರುವ ಸಲಹೆ : ಆಕ್ಷೇಪಣೆಗಳನ್ನು ಪರಿಗಣಿಸಲಾಗುತ್ತಿದೆ. ಶೀಘ್ರ ದಲ್ಲಿಯೇ ಅಂತಿಮ ನಿಯಮಗಳನ್ನು ಹೊರಡಿಸಲಾಗುವುದು.

ವಿಷಯ :- ಹಸಿರು ಕಾರ್ಡುಗಳ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 959 (1721)

ಶ್ರೀ ಜೆ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಾದ್ಯಂತ ಹಸಿರು ಕಾರ್ಡು ಸಂಪೂರ್ಣವಾಗಿ ವಿತರಿಸಲಾಗಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ;

ಇ) ಇಡೀ ರಾಜ್ಯದಲ್ಲಿ ಹಸಿರು ಕಾರ್ಡು ಸಮರ್ಪಕವಾಗಿ ವಿತರಿಸಲು ಸರ್ಕಾರದವರು ಹಮ್ಮಿಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) ಇಲ್ಲ :- ರಾಜ್ಯದ 8 ಜಿಲ್ಲೆಗಳಲ್ಲಿ ಅಂದರೆ ರಾಯಚೂರು, ದಕ್ಷಿಣ ಕನ್ನಡ, ಉತ್ತರಕನ್ನಡ, ಬಳ್ಳಾರಿ, ಮಡಿಕೇರಿ, ಚಿತ್ರದುರ್ಗ, ಬೆಳಗಾವಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಸಿರು ಪಡಿತರ ಚೀಟಿ ಬರದು ವಿತರಿಸುವ ಕಾರ್ಯ ಪೂರ್ಣಗೊಂಡಿದ್ದು, 5 ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಹಸಿರು ಪಡಿತರ ಚೀಟಿ ಬರೆದು ವಿತರಿಸುವ ಕಾರ್ಯ ಭಾಗಶಃ ಪೂರ್ಣಗೊಂಡಿದ್ದು ಇನ್ನುಳಿದ 7 ಜಿಲ್ಲೆಗಳಲ್ಲಿ ಹಸಿರು ಪಡಿತರ ಚೀಟಿ ಬರೆದು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.

ಆ) ಹೊಸದಾಗಿ ಹಸಿರು ಪಡಿತರ ಚೀಟಿ ನೀಡುವಂತೆ ಕೋರಿ ಗ್ರಾಮ ಸಭೆಗಳಲ್ಲಿ ಒಟ್ಟು 15,24,610 ಅರ್ಜಿಗಳನ್ನು ಸ್ವೀಕರಿಸಿದ್ದು, ಸದರಿ ಅರ್ಜಿಗಳನ್ನು ಮನೆಮನೆಗೆ ತರಳಿ ತಪಾಸಣೆ ಮಾಡುವ ಕೆಲಸವನ್ನು ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿ ವರ್ಗದವರ ಕಂದಾಯ ಇಲಾಖೆಯ ಸಿಬ್ಬಂದಿ ವರ್ಗದವರ ಸಹಕಾರದೊಡನೆ ಪೂರ್ಣಗೊಳಿಸಿರುತ್ತಾರೆ. ಕಂದಾಯ ಇಲಾಖೆಯ ಸಿಬ್ಬಂದಿಯವರ ಅಸಹಕಾರದಿಂದ ಸದರಿ ತಪಾಸಣೆ ಕಾರ್ಯದಲ್ಲಿ ಪ್ರಾರಂಭಿಕ ಹಂತದಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ. ಅಲ್ಲದೆ ಗುರ್ತಿಸಿದ ಫಲಾನುಭವಿಗಳ ಅರ್ಹತೆಯನ್ನು ದೃಡೀಕರಿಸಿಕೊಳ್ಳಲು ಉಪ ವಿಭಾಗಾಧಿಕಾರಿಗಳ ಹಂತದ ಅಧಿಕಾರಿಗಳಿಂದ ಮರು ತಪಾಸಣೆ ಮಾಡಿಸುವ ಹಂತದಲ್ಲಿ ಲೋಕಸಭೆ ಚುನಾವಣೆಗಳು ಬಂದಿದ್ದರಿಂದ, ಈ ಕಾರ್ಯ ಸ್ವಲ್ಪ ವಿಳಂಬವಾಗಿರುತ್ತದೆ.

ರಾಜ್ಯದ 5 ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಿಗೆ ಹಸಿರು ಪಡಿತರ ಚೀಟಿ ಬರೆದು ವಿತರಿಸಲು ಸೂಚನೆ ನೀಡಿದ್ದು ಸದರಿ ಜಿಲ್ಲೆಗಳಲ್ಲಿ ಹಸಿರು ಪಡಿತರ ಚೀಟಿ ಬರೆದು ವಿತರಿಸುವ ಕಾರ್ಯವು ಪ್ರಗತಿಯಲ್ಲಿದೆ.

ಬಿಜಾಪುರ ಹಾಗೂ ಹಾಸನ ಜಿಲ್ಲೆಗಳಲ್ಲಿ ಸಮೀಕ್ಷಾ ಕಾರ್ಯವು (ಜಿಲ್ಲಾಧಿಕಾರಿ ಗಳಿಂದ) ಪೂರ್ಣಗೊಂಡಿರುವುದಿಲ್ಲ.

ಗುಲ್ಬರ್ಗಾ, ಧಾರವಾಡ, ಮೈಸೂರು, ಶಿವಮೊಗ್ಗ ಹಾಗೂ ಬೀದರ್ ಜಿಲ್ಲೆಗಳಲ್ಲಿ ಸಮೀಕ್ಷಾ ಕಾರ್ಯದಲ್ಲಿ ಏರುಪೇರುಗಳಿದ್ದುದರಿಂದ, ಗುರ್ತಿಸಿದ ಫಲಾನುಭವಿಗಳಲ್ಲಿ ಭಾಗಶಃ ಫಲಾನುಭವಿಗಳಿಗೆ ಹಸಿರು ಪಡಿತರ ಚೀಟಿ ಬರೆದು ವಿತರಿಸುವಂತೆ ಸೂಚಿಸಿದೆ.

52,00,000 ತ್ರಿವರ್ಣ- ಪಡಿತರ ಚೀಟಿಗಳನ್ನು ಈಗಾಗಲೇ ಹಸಿರು ಪಡಿತರ ಚೀಟಿಗಳಿಂದ ಬದಲಾಯಿಸಿ ಕೊಡಲಾಗಿದೆ. ಹೊಸದಾಗಿ ಪಡಿತರ ಚೀಟಿ ನೀಡುವಂತೆ ಕೋರಿ ಆಕ್ಟೋಬರ್ 95 ನೇ ಮಾಹೆಯಲ್ಲಿ ನಡೆಸಿದ ಗ್ರಾಮ ಸಭೆಗಳಲ್ಲಿ ಒಟ್ಟು 15,24,610 ಅರ್ಜಿಗಳು ಬಂದಿದ್ದು ಸದರಿ ಅರ್ಜಿಗಳನ್ನು ಫೆಬ್ರವರಿ ಹಾಗೂ ಮಾರ್ಚ್ 96 ನೇ ಮಾಹೆಗಳಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಲು ಮನೆ ಮನೆಗೆ ತೆರಳಿ

ತಪಾಸಣೆ ನಡೆಸಲಾಗಿದೆ. ರಾಜ್ಯದ 8 ಜಿಲ್ಲೆಗಳಲ್ಲಿ ಈಗಾಗಲೇ ಹಸಿರು ಪಡಿತರ ಚೀಟಿ ಬರೆದು ವಿತರಿಸುವ ಕಾರ್ಯವು ಏಪ್ರಿಲ್ 96 ನೇ ಮಾಹೆಯಲ್ಲಿಯೇ ಪೂರ್ಣ ಗೊಂಡಿರುತ್ತದೆ, ಇನ್ನುಳಿದ ಜಿಲ್ಲೆಗಳಲ್ಲಿ ಹಸಿರು ಪಡಿತರ ಚೀಟಿ ಬರೆದು ವಿತರಿಸುವ ಕಾರ್ಯವು ವಿವಿಧ ಹಂತಗಳಲ್ಲಿರುತ್ತದೆ. ಆದಾಗ್ಯೂ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸದರಿ ಕಾರ್ಯಕ್ರಮವನ್ನು ದಿನಾಂಕ15-08-96 ರೊಳಗಾದರೂ ಸಹ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ.

ವಿಷಯ :- ಸಹಕಾರ ಸಂಘಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 960 (1722)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಹಕಾರ ಸಂಘಗಳಿಗೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ, ಇದ್ದಲ್ಲಿ ಅದಕ್ಕೆ ಕಾರಣಗಳೇನು ;

ಆ) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉತ್ತಮಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) ಇಲ್ಲ. ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಾಗ ಸಹಕಾರ ಸಂಘಗಳಿಗೆ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ಸಹಕಾರ ಸಂಘದಲ್ಲಿ ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸುವ ಗುರಿ ಹೊಂದಿರುವುದರಿಂದ ಸಾರ್ವಜನಿಕ ವಿತರಣೆ ಸುಗಮವಾಗಿ ನಡೆಯುವಂತಾಗುತ್ತದೆ.

ಆ) ಪ್ರತಿ ನ್ಯಾಯಬೆಲೆ ಅಂಗಡಿಗೆ ಜಾಗೃತಿ ಸಮಿತಿಗಳನ್ನು ರಚಿಸಲಾಗಿದೆ. ಈ ಜಾಗೃತಿ ಸಮಿತಿಯ ಸದಸ್ಯರು ಆದೇ ನ್ಯಾಯಬೆಲೆ ಅಂಗಡಿಯ ಪಡಿತರ ಚೀಟಿದಾರ ರಾಗಿರುತ್ತಾರೆ. ನ್ಯಾಯಬೆಲೆ ಅಂಗಡಿಗಳ ಕಾರ್ಯ ಚಟುವಟಿಕೆಗಳನ್ನು ನಿಗಾ ಇಡುವಂತೆ ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ಸೂಚನೆಗಳನ್ನು ನೀಡಲಾಗಿದೆ. ಇಲಾಖೆಯ ಹಿರಿಯ ಅಧಿಕಾರಿಗಳು ಸಹ ತನಿಖೆಗಳನ್ನು ನಡೆಸುತ್ತಿರುತ್ತಾರೆ. ದುರುಪಯೋಗಗಳು ಕಂಡುಬಂದಾಗ ಅಗತ್ಯ ವಸ್ತುಗಳ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ :- ಗಡಿ ಜಿಲ್ಲೆಯಲ್ಲಿ ನಕ್ಸಲೀಯರ ಹಾವಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 961 (1723)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?